Rega No M 1229 | 43rd Year | Sri 'Satyavadi' Mysore | 30—ಎ 1959

doc-22
T.P-2

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಬುನೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿಗೆ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಭೂಪಾಲ್‌ನಲಿ ಕೋಮುವಾರು ಘರ್ಷಣೆ; 40 ಮಂದಿಗೆ ಗಾಯ

ಭೂಪಾಲ್ 29 — ರಂಗಪಂಚಮಿ ದಿನವಾದ ಈ ದಿನ ಹೋಲಿ ಕ್ರೀಡಾಗಾರ ಜನರಿಗೂ ಮತ್ತೊಂದು ಮತದ ಜನರಿಗೂ ಘರ್ಷಣೆ ಆಗಿ ಸಂಜೆಯಿಂದ ಬೆಳಿಗ್ಗೆ ವರೆಗೆ ಕರ್ಫ್ಯೂ ಜಾರಿ ಆಗಿದೆ. 13 ಪೋಲೀಸರು ಮತ್ತು 2 ಮ್ಯಾಜಿಸ್ಟ್ರೇಟರು ಸೇರಿ 40 ಜನರು ಗಾಯಗೊಂಡರು ಅನೇಕ ಜನರು ದಸ್ತಗಿರಿ ಆಗಿದ್ದಾರೆ

ವಕೀಲ ಸಂಘ ಸ್ಥಾಪನೆ

ನವ ದೆಹಲಿ 29 — ವಕೀಲ ಸಂಘ ಸ್ಥಾಪನೆ ಮಾಡಬೇಕೆಂದು ಅಖಿಲ ಭಾರತ ವಕೀಲರ ಸಮ್ಮೇಳನ ನಿರ್ಧರಿಸಿದೆ

ಧಾನ್ಯ ಬೆಲೆ ಹತೋಟಿ

ನವದೆಹಲಿ 29 — ಮುಂದಿನ ಮಾಹೆ 3 ಮತ್ತು 4 ನೇ ತಾ|| ಸಮಾವೇಶ ಆಗುವ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯಲ್ಲಿ ಆಹಾರ ಧಾನ್ಯಗಳ ಬೆಲೆಯಲ್ಲಿ ಹತೋಟಿ ತರುವ ಅಂಶ ಪರಿಶೀಲನೆಗೆ ಬರುವದೆಂಬ ಸಂಭವ ಇದೆ.

ಲಾಮನ ಅಪಹರಣ

ಕಾಂಗ್ರಾ 29 — ಲಾಸಾದಲ್ಲಿರುವ ಲೋಕ ಪ್ರದೇಶಕ್ಕೆ ಲಾಮಾರಿಂದ ಅಪಹರಿಸಿ ಹೋಗಲಾಗಿದೆ ಎಂದು ನವ ಚೀನಾ ಸಂಸ್ಥೆ ತಿಳಿಸಿದೆ

ಗೋವೆ ಪ್ರಾಯಿಲೆ

ಪಣಜಿ 29 — ದಲಾಯಿ ಲಾಮರು ತಿಬೆಟ್ ರೋಗಗ್ರಸ್ತರಾಗಿರು

ಸಾಲೆಯ ಪುಂಜಾಂಗ

ಹಾವಿದ್ಯಾ ದೈವಜ್ಞ ಶಿಖಾಮಣಿ ಪ್ರಶ್ನೆ ಜೋಯಿಸರಿಂದ

ಮೂಲ

ವಿಮಾನ ಅಪಘಾತದಲ್ಲಿ 24 ಜನರ ಮರಣ

ಕಲ್ಕತ್ತಾ 29 — ಈ ಬೆಳಿಗ್ಗೆ ಅಸ್ಸಾಮಿನ ಸಿಲ್ಚಾರಿನಿಂದ 25 ಮೈಲಿಗಳ ದೂರದ ಹಾಯಿ ಲಕಂಡಿ ಬಳಿ ಅಗರ್ತಲದಿಂದ ಹಾರಿದ 24 ಜನರಿದ್ದ ವಿಮಾನ ಅಪಘಾತಕ್ಕೀಡಾಗಿ 24 ಜನ ಅದರಲ್ಲಿದ್ದವರು ಸತ್ತರು

ತಾರಾಸಿಂಗರ ಉಪವಾಸ

ನವ ದೆಹಲಿ 29 — ಪಂಜಾಬಿನಲ್ಲಿ ಗುರುದ್ವಾರಗಳ ಆಡಳಿತದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವದನ್ನು ಪ್ರತಿಭಟಿಸಿ ಮಾಡಲು ಉಪವಾಸ ಹೂಡುವ ಬಗ್ಗೆ ಒಂದೆಂಡು ದಿನಗಳಲ್ಲಿ ತೀರ್ಮಾನ ಮಾಡುವದಾಗಿ ಅಕಾಲಿ ನಾಯಕ ಮಾ|| ತಾರಾಸಿಂಗರು ತಿಳಿಸಿದರು

ಆಂಜೆಯವರಿಗೆ ಅನುಕೂಲ

ಮದ್ರಾಸು 29 — ಕೇಂದ್ರ ಸಂಪರ್ಕ ಮತ್ತು ಸಾರಿಗೆ ಮಂತ್ರಿ ಶ್ರೀ ಎಸ್ ಕೆ ಪಾಟೀಲರು ಹೇಳಿಕೆಯಿತ್ತು, ಹೆಚ್ಚು ದಕ್ಷತೆಯಿಂದ ಅಂಜೆ ತಂತಿ ಇಲಾಖೆಯವರು ಉಳಿಸಿದರೆ ಅದನ್ನೆಲ್ಲ ಅವರಿಗೆ ಕೊಡುವದಾಗಿ ತಿಳಿಸಿದರು ಮದರಾಸು ಪೋಸ್ಟ ಮಾಸ್ಟರು ಜನರಲ್‌ರು ರೂ. 25 ಲಕ್ಷ ವೆಚ್ಚದ ಕಛೇರಿ ಆರಂಭಗೊಳಿಸುತ್ತಾ ಅವರು ತಿಳಿಸಿದರು ಇಲಾಖೆ ರೂ 5 ಕೋಟಿ ಉಳುವರಿ ಪಡೆದಿರುವದಾಗಿ ತಿಳಿಸಿದರು

ನವದೆಹಲಿ 28— ಭಾರತ ಸರ್ಕಾರ ದಪಂ ಅನಿರ್ಬಂಧ ಮಾರಾಟಕ್ಕಾಗಿ ಮತ್ತೆ 150000 ಟನ್ನುಗಳಷ್ಟು ಸಕ್ಕರೆಯನ್ನು ಬಿಡುಗಡೆ ಮಾಡಿರುವರು.

ಹಿಂದೂಗಳಿಗೆ ಅಸ್ತ್ರ ಕೊಡಿ

ಬಂಕುರ 28— ಇಲ್ಲಿ ನಡೆದ 2 ದಿನಗಳ ಬಂಗಾಳಾ ಪ್ರಾಂತೀಯ ಹಿಂದೂ ಮಹಾ ಸಭೆಯು, ಗಡಿಭಾಗದಲ್ಲಿ ಅವೇರಿಕಾ ಮದ್ದುಗುಂಡಿಸೊಡನೆ ಆಕ್ರಮಣ ನಡೆಸುತ್ತಿರುವುದನ್ನು ಪ್ರತಿಭಟಿಸಿ, ಸಂಶಯಾಸ್ಪದನು ಓಡಿಸಿ, ಗಡಿಭಾಗದಲ್ಲಿರುವ ಹಿಂದೂಗಳಿಗೆ ಶಸ್ತ್ರಾಸ್ತ್ರ ಒದಗಿಸಬೇಕೆಂದು ಠರಾವು ಮಾಡಿತು.

ಕೇಂದ್ರ ಮ್ಯೂಜಿಯಂ ಪ್ರಕಟಣೆ

ಲಾಹೋರು 28 — ಲಾಹೋರಿಗೆ ವೆಸ್ಟ ಇಂಡೀಸಿನ ಕ್ರಿಕೆಟ್ ಟೀಮು ಬರುವ ಈ ಸಮಯಕ್ಕೆ ಸರಿಯಾಗಿ, ಬುದ್ಧದೇವನು ಕ್ರಿಕೆಟ್ ಆಡುತ್ತಿದ್ದನೆಂದು ತೋರುವ ಗಾಂಧಾರ ಶಿಲ್ಪದ ಫೋಟೊ ಮತ್ತು ಪಾಕಿಸ್ತಾನವು 2000 ವರ್ಷಗಳಿಂದ ಕ್ರಿಕೆಟ್ ಆಡುತ್ತಿದೆ ಎಂಬ ಲೇಖನದೊಡನೆ ಕೇಂದ್ರ ಮ್ಯೂಜಿಯಮ್ಮಿನ ಮಾಲಿಕ್ ಇವರು ಪ್ರಕಟಿಸಿದ್ದಾರೆ.

ಸ್ಥಾನ ವಿನಾಸಲು

ಡಾಕಾ 27— ಪ್ರಾಂತೀಯ ಮತ್ತು ಕೆಳದರ್ಜೆಯ ಕಲಸಗಳಲ್ಲಿ ಮುಸ್ಲೀಮೇತರರಿಗೆ ಶೇಕಡ 23 ಎನಾಸಲಾಗಿಡಲಾಗುವುದೆಂದು ಪೂರ್ವ ಪಾಕಿಸ್ತಾನ ಸರ್ಕಾರ ಪ್ರಕಟಿಸಿದೆ.

ಕರೀಂಗಂಜ್ 29 — ಪಾಕಿಸ್ತಾನ ಸೇನಿಕರಗುಂಡಿನ್ಯೆಟಿನಿಂದ ಬುರಾವುಂಜಿಯಲ್ಲಿನ ವಿಧ್ವೆಯೋರ್ವಳಿಗೆ, ಮತ್ತೋರ್ವನಿಗೆ ಗಾಯವಾಯಿತು

ಕಮ್ಯುನಿಸ್ಟರಿಗೆ ಗೆಲವು

ಮದರೈ 28— ಮಧುರೆ ಪೌರಸಭೆ ಚುನಾವಣೆಯಲ್ಲಿ ಕಮ್ಯುನಿಸ್ಟರು ತಾವು ಸ್ಪರ್ಧಿಸಿದ್ದ 12 ಸ್ಥಾನಗಳನ್ನೂ ಗೆಲಿದಿರುವರು ; ಮತ್ತು ಇದೇ ಹೆಚ್ಚಿನ ಸ್ಥಾನ ಹೊಂದಿರುವ ಪಕ್ಷವಾಗಿದೆ — ಕಳೆದ ಹತ್ತು ವರ್ಷಗಳಿಂದ ಪೌರಸಭೆಯ ಆಡಳಿತ ನಡೆಸುತ್ತಿದ್ದ ಕಾಂಗ್ರೆಸ್ಸಿಗೆ ಈ ಸಾರಿ 9 ಸ್ಥಾನಗಳು ದೊರೆತಿದೆ.

ಪ್ರದರ್ಶನ

ಮೈಸೂರು 28— ಮುನಿಪಾಲಿಟಿ ಆರೋಗ್ಯ ಇಲಾಖೆಯವರು ಆರೋಗ್ಯಕ್ಕೆ ಸಂಬಂಧಿಸಿದ ಸಾಕ್ಷ್ಯಚಿತ್ರಗಳನ್ನು ಟೌನ್ ಹಾಲಿನಲ್ಲಿ ತಾ|| 2 ರ ಸಂಜೆ 6 ರಿಂದ 9 ರವರೆಗೆ ಫ್ರೀಯಾಗಿ ಪ್ರದರ್ಶಿಸುವರೆಂದೂ, ಪೌರರು ಬಂದು ನೋಡಬೇಕೆಂದೂ ಪೌರಸಭಾಧ್ಯಕ್ಷರು ತಿಳಿಸಿರುತ್ತಾರೆ.

ಉತ್ಸವ ಆರಂಭ

ಟೋಕಿಯೊ 27— ಬುದ್ಧ ಮಹಾ ವಾರಿನಿರ್ವಾಣದ 2500 ನೇ ವರ್ಷದ ಸಂಬಂಧದ 5 ದಿವಸಗಳ ಉತ್ಸವವು ಇಂದು ಜಪಾನಿನಲ್ಲಿ ಪ್ರಾರಂಭವಾಗಿದೆ — ಭಾರತವೂ ಸೇರಿ 13 ದೇಶಗಳಿಂದ 59 ಮಂದಿ ಮಹಾವಮಹಾ ಬೌದ್ಧ ವಿದ್ವಾಂಸರು ಬಂದಿರುವರು.

ಫತೇಘರ 29 — ಸುಲ್ತಾನಪುರದಲ್ಲಿ ಫಸಲು ಕೂಯ್ಲುವ ಸಂಬಂಧದಲ್ಲಿ ಠಾಕೂರರಿಗೂ ಮತ್ತು ಬ್ರಾಹ್ಮಣರಿಗೂ ಕೊಡೆದಾಟವಾಗಿ ಒರ್ವ ಠಾಕೂರನು ತಾತ್ಕಾಲಿಕ ಮರಣ ಪತ್ರರು

ಬೆಂಗಳೂರಿನ ವಲ್ಕನೈಸಿಂಗ್ ಅಂಗಡಿಯೊಂದರಲ್ಲಿ ನಿನ್ನೆ ಬೆಳಿಗ್ಗೆ ಅನಾಹುತವಾಗಿ ರೂ 4 ಸಹಸ್ರ ನಷ್ಟ ಅಂದಾಜು ಆಗಿದೆ

ಮೌಲಾನಾ ಅಜಾದರ ಅಗಾಧ ವಿದ್ವತ್

ಮೌಲಾನಾ ಅಜಾದರು ಮೊದಲಿನಿಂದಲೂ ಎಲ್ಲಾ ವಿಷಯಗಳಲ್ಲಿಯೂ ವಿದ್ವತ್ತನ್ನು ಹೊಂದಿದ್ದರು, ತಮ್ಮ 14 ನೇ ವರ್ಷದಲ್ಲಿ 'ನಾಲಂಗೆ ಅಲ್ಲಾಂ' ಎಂಬ ಪತ್ರಿಕೆ ಹೊರಡಿಸುತ್ತಿದ್ದು ಅದರಲ್ಲಿ ತಮ್ಮ ಕವಿತ್ವಗಳನ್ನು ಪ್ರಕಟಿಸುತ್ತಿದ್ದುದಲ್ಲದೆ ಅನೇಕ ವಿದ್ವತ್ ಸಭೆಯಲ್ಲಿ ಭಾಗವಹಿಸುತ್ತಿದ್ದರು : ಪರ್ಷಿಯಾದ ಪ್ರಖ್ಯಾತ ಕವಿ ಗಲೀಬರ ಶಿಷ್ಯರೂ: ಹೆಚ್ಚು ವಯಸ್ಸಾಗಿದ್ದವರೂ ಆದ ನಾದಿಂ ಖಾನರು ಮೌಲಾನಾ ಅಜಾದರ ಕವಿತಾ ಜ್ಞಾನ ಪರೀಕ್ಷಿಸಲು ಆಶೆಪಟ್ಟು 'ಮೌಲಾನರಿಗೆ 'ಯಾದ್' ನ ಹೋ, ಷಾದ್ ನ ಹೋ, ಅಬಾದ್ ನ ಹೋ' ಎಂಬ ವಿಷಯ ಕೊಟ್ಟು, ಅದರ ಮೇಲೆ ಕವಿತೆ ರಚಿಸಲು ತಿಳಿಸಿದಾಗ, ಮೌಲಾನರು, ಕವಿತೆಗಳ ಸುರಿಮಳೆ ಸುರಿಸಲು, ವಯಸ್ಸಾದ ನಾದಿಂಖಾನರಿಗೆ ಮಹದಾನಂದವಾಗಿ, ತನ್ನನ್ನೇ ವರಿಸಿತು, ಘನತೆ ಔಚಿತ್ಯವನ್ನು ಲಕ್ಷಿಸದೆ, ಅಂಗಡಿಗಳ ಮುಂದೆ ನಡು ರಸ್ತೆಯಲ್ಲಿ 'ಸುಭಾನ್ ಅಲ್ಲಾ, ಸುಭಾನ್ ಅಲ್ಲಾ' ಎಂದು ಕೂಗಿಕೊಳ್ಳುತ್ತಾ ಕುಣಿದಾಡಲು ಪ್ರಕ್ರಮಿಸಿದನು.

o o o o

ನದೀ ತಳದಲ್ಲಿ ಎಣ್ಣೀ ಕೊಳವಿ ಮಾರ್ಗ

ಓಮಸ್ಕ್ 17— ಸೈಬೀರಿಯಾದ ದೊಡ್ಡ ನದಿ ಇರ್ತಿಯ್ಸ್ ತಳದಲ್ಲಿ ಖಂಡಾತರಗಾಮಿ ತೈಲವಾಹಕ ಕೊಳವೆ ಮಾರ್ಗವನ್ನು ನಿರ್ಮಿಸಲಾಗಿದೆ.

o o o o

ವಿದ್ಯುತ್ ಗಡಿಯಾರ

ಮಾಸ್ಕೊ 18— ಸೋವಿಯಟ್ ವಿಜ್ಞಾನಶಾಸ್ತ್ರ ಪರಿಷತ್ತಿನ ಭೌತ ಶಾಸ್ತ್ರ ವಿದ್ಯಾಲಯವು ನೂತನ ಅಣು ಉತ್ಪಾದಕ ಯಂತ್ರ ಚಾಲಿತ ಗಡಿಯಾರ ವೊಂದನ್ನು ತಯಾರಿಸಿದೆ ; ಪರ್ಯಾಯ ಪ್ರವಾಹದ ಉದ್ಯುತ್ತನ್ನು ಇದಕ್ಕೆ ಬಳಸುವುದಿಲ್ಲ. ಈ ವಿದ್ಯುತ್ ಗಡಿಯಾರವು 300 ವರ್ಷಗಳಲ್ಲಿ ಕೇವಲ 1 ಕ್ಷಣ ದ (ಸೆಕೆಂಡು) ವ್ಯತ್ಯಾಸವನ್ನು ಮಾತ್ರವೇ ತೋರಿಸುವುದು.

o o o o

ಅಮೇರಿಕನ್ನರ ಅಭಿಲಾಷೆ

ಅಮೇರಿಕಾದಾದ್ಯಂತ ಅಮೆರಿಕನ್ನರು ಈಗ ವಿದೇಶೀ ಸರಕುಗಳಲ್ಲಿ ಅಧಿಕಾಧಿಕ ಆಸಕ್ತಿಯನ್ನು ತೋರಿಸುತ್ತಿದ್ದಾರೆ.

o o o o

ಭಾರತಕ್ಕೆ ಸಾಲ

ಟೆನ್ನಸಿ 25— ಭಾರತಕ್ಕೆ 200000000 ಡಾಲರುಗಳ ಸಾಲವನ್ನು ಕೊಡಲಾಗುವುದಾಗಿ ಇತ್ತೀಚೆಗೆ ಪ್ರಕಟಿಸಲಾಗಿದೆಯಷ್ಟೆ : ಈ ಸಾಲದಿಂದ ಆ ದೇಶದ 'ವಿವಿಧೋದ್ದೇಶದ ಟಿ ವಿ ಎ ಮಾದರಿಯ ನದಿ ಕಣಿವೆ ಅಭಿವೃದ್ಧಿ ಯೋಜನೆಗಳನ್ನು ನಿರ್ಮಿಸಬಹುದು, ಎಂಬದಾಗಿ ಟೆನ್ನಸಿವ್ಯಾಲಿ ಅಥಾರ್ಟಿ ಪ್ರದೇಶದ ಜನಕ್ಕೆ ಸೇವೆ ಸಲ್ಲಿಸುವ ಈ ಪ್ರದೇಶದ ಕೇಂದ್ರ ಸ್ಥಳದಿಂದ ಪ್ರಕಟವಾಗುವ ದಿನಪತ್ರಿಕೆಯೊಂದು ಬರೆದಿದೆ — ಆದರೆ ಭಾರತದಂತಹ ರಾಷ್ಟ್ರಕ್ಕೆ ಅದು ಆಹಾರಾಭಿವೃದ್ಧಿಯ ಚೈತನ್ಯವನ್ನು ಹೆಚ್ಚಿಸಿಕೊಳ್ಳಲು ನೆರವು ನೀಡಿದಾಗ ಮತ್ತು ಅದರ ಜನತೆಗೆ ಉತ್ತಮ ಜೀವನ ಸೌಕರ್ಯಗಳನ್ನು ಒದಗಿಸಲು ಸಹಾಯ ಮಾಡಿದಾಗ ಆರ್ಥಿಕ ಸಹಾಯದ ಮಹತ್ವ ನಮಗೆ ದೃಗ್ಗೋಚರವಾಗುತ್ತದೆ ಎಂದೂ ಪ್ರಕಟಿಸಿದೆ.

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಷಾ ಕಾ ಶೊ ಕೈ ಸಿ

ಆಯ್ಯನ್ಸ್‌ಡಾರ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

ವುಡ್‌ಲಾಂಡ್ ಯಶಸ್ವಿ 3 ನೇ ವಾರ

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — | ದಿನ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ — ನೋಡಲು ಮರೆಯಬೇಡಿ

ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು

ದಿಗ್ದರ್ಶನ : ರಾಜ್ ಖೋಸ್ಲ ಸಂಗೀತ : ಎಸ್. ಡಿ. ಬರ್ಮನ್

ಅಪೆರಾ— 28-3-59 ರಿಂದ

ಸಿಂದ್‌ಬಾದ್ ಕಿ ಬೇಟಿ

ನಾದಿಯಾ – ಪ್ರಾಣ್ – ಜಯರಾಜ್ ನಾರ್ಟ್ಯಮಾಡಿರುವ

ಮನಮೋಹಕ ಹಿಂದಿ ಚಿತ್ರ

ಪ್ರತಿದಿನ 3 ಆಟಗಳು

SHAKTI SUDHA

A Superb Tonic

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಸಮನ್ವಯ

ಏಕೈಕ ಕನ್ನಡ ಪತ್ರಿಕೆ

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

Edited, Printed & Published by Dharma Prachara Narala M Krishna Rao, at the Satyavadi Press Chamarajapuram, M